# ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ

[ಕರ್ನಾಟಕ ಸರ್ಕಾರದ ಒಂದು ಸ್ವಾಯುತ್ತ ಸಂಸ್ಥೆ]

**ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು – 560002.**

Telephone:26700810, Tele fax:26704342

email:director_bmcri@yahoo.co. in


ಸಂಖ್ಯೆ: ಬೆಂವೈವಿಸಂಸಂ/ಆಶಾ/54/2020-21 Dated:03 /08/2020

## ತಾತ್ಕಾಲಿಕ ನೇಮಕಾತಿ ಆದೇಶ

ವಿಷಯ:- ಕೋವಿಡ್-19 ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಹೆಚ್ಚುವರಿ ವೈದ್ಯಕೀಯ, ಅರೆವೈದ್ಯಕೀಯ, ಮತ್ತು ಗ್ರೂಪ್-ಡಿ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 327 ಎಂಎಂಸಿ 2020 ಬೆಂಗಳೂರು ದಿನಾಂಕ:13-07-2020.

2. ಈ ಸಂಸ್ಥೆಯ ಸಮ ಸಂಖ್ಯೆ ನೇಮಕಾತಿ ಪ್ರಕಟಣೆ ದಿನಾಂಕ: 15-07-2020.

3. ಈ ಸಂಸ್ಥೆಯ ಸಮ ಸಂಖ್ಯೆ ಅಧಿಕೃತ ಜ್ಞಾಪನಾ ಪತ್ರ ದಿನಾಂಕ: 30-07-2020 ರಲ್ಲಿ ರಚಿಸಿರುವ ಆಯ್ಕೆ ಸಮಿತಿ.

4. ದಿನಾಂಕ:03-08-2020 ಆಯ್ಕೆ ಸಮಿತಿ ಪಟ್ಟಿ.

******

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಅಧಿನದಲ್ಲಿ ಬರುವ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೋವಿಡ್-19 ಕರ್ತವ್ಯಕ್ಕಾಗಿ ಉಲ್ಲೇಖ(4) ರಲ್ಲಿನ ಆಯ್ಕೆ ಸಮಿತಿ ಪಟ್ಟಿಯಂತೆ ಆಯ್ಕೆಯಾಗಿರುವ ಕೆಳಕಂಡ ಗ್ರೂಪ್-ಡಿ ನೌಕರರನ್ನು ದಿನಾಂಕ:03/08/2020 ರಿಂದ 31/10/2020 ರ ವರೆಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕಮಾಡಲಾಗಿದೆ.

ಸದರಿಯವರ ಗುತ್ತಿಗೆ ಅವಧಿಯು ಮುಗಿದ ತಕ್ಷಣ ಸ್ವಯಂಚಾಲಿತವಾಗಿ ಬಿಡುಗಡೆ ಹೊಂದುವರು ಹಾಗೂ ಯಾವುದೇ ಮುನ್ಸೂಚನೆಯ ಆದೇಶವನ್ನು ನೀಡಲಾಗುವುದಿಲ್ಲ.

| ಕ್ರ ಸಂ | ನೌಕರರ ಹೆಸರು | ವಿಳಾಸ | ವೇತನ ಸೆಳೆಯುವ ಹುದ್ದೆ | ಕರ್ತವ್ಯ ನಿರ್ವಹಿಸುವ ಸ್ಥಳ | ವೇತನ | ವೇತನ ಪ್ರಾಧಿಕಾರ |
|---|---|---|---|---|---|---|
| 1. | ಅಬೆಲ್ | ಹೊಂಗಸಂದ್ರ, ಬೆಂಗಳೂರು | ಗ್ರೂಪ್-ಡಿ | ವಿಕ್ಟೋರಿಯಾ ಆಸ್ಪತ್ರೆ | 16,500/- | ಬೆಂವೈವಿಸಂಸಂ |
| 2. | ಮಂಜುನಾಥ ಹೆಚ್ | ಬೈಲಾಂಜನೇಯ ನಗರ, ಟಿ.ಜಿ ಪಾಳ್ಯ, ಬೆಂಗಳೂರು | ಗ್ರೂಪ್-ಡಿ | ವಿಕ್ಟೋರಿಯಾ ಆಸ್ಪತ್ರೆ | 16,500/- | |
| 3. | ಸಂತೋಷ್ ಬಿ ಚವಾಣ್ | ಇಳಕಲ್ ತಾಂಡ, ಎಂ.ಟಿ ಪಾಳಿ, ಕಲಬುರ್ಗಿ | ಗ್ರೂಪ್-ಡಿ | ವಿಕ್ಟೋರಿಯಾ ಆಸ್ಪತ್ರೆ | 16,500/- | |
| 4. | ಅರುಣ್ ಕುಮಾರ್ ಎಂ.ಎಲ್ | ವಿ.ಎಸ್ ಗಾರ್ಡನ್, ಜೆ.ಜೆ ಆರ್ ನಗರ ಬೆಂಗಳೂರು | ಗ್ರೂಪ್-ಡಿ | ವಿಕ್ಟೋರಿಯಾ ಆಸ್ಪತ್ರೆ | 16,500/- | |

ಷರತ್ತು ಮತ್ತು ನಿಬಂಧನೆಗಳು:

1. ಸಂಚಿತ ವೇತನದ ಮೇಲೆ ಮಾಡಿರುವ ಈ ನೇಮಕಾತಿಯು ಆದೇಶದಲ್ಲಿ ನಮೂದಿಸಿರುವ ಅವಧಿಗೆ ಒಳಪಟ್ಟಿರುತ್ತದೆ.

2. ನಿರ್ದೇಶಕರು ಹಾಗೂ ಡೀನ್, ಬಿಎಂಸಿಆರ್ಐ ಹಾಗೂ ಅದರ ಅಧೀನದಲ್ಲಿ ಬರುವ ಆಸ್ಪತ್ರೆಗಳ ವೈದ್ಯಕೀಯ ಅಧೀಕ್ಷಕರು ರವರು ಕಾಲಕಾಲಕ್ಕೆ ವಹಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ತಪ್ಪದೆ ನಿರ್ವಹಿಸತಕ್ಕದ್ದು.

3. ಗುತ್ತಿಗೆ ಆಧಾರದ ನೇಮಕಾತಿಯನ್ನು ಯಾವುದೇ ಕಾರಣವಿಲ್ಲದೆ ಯಾವುದೇ ಸಮಯದಲ್ಲಾದರೂ ಕೊನೆಗೊಳಿಸುವ ಅಧಿಕಾರ ನೇಮಕಾತಿ ಪ್ರಾಧಿಕಾರಕ್ಕಿರುತ್ತದೆ. ಒಂದು ವೇಳೆ ಗುತ್ತಿಗೆ ನೌಕರನು ಅವಧಿಗಿಂತ ಮೊದಲೇ ಕೆಲಸ ಬಿಡುವುದಾದಲ್ಲಿ ಒಂದು ತಿಂಗಳ ಮುಂಚಿತವಾಗಿ ಮಾಹಿತಿಯನ್ನು ನೀಡಿ ಅಥವಾ ಒಂದು ತಿಂಗಳ ಸಂಚಿತ ವೇತನ ನೀಡಿ ಸೇವೆಯನ್ನು ಬಿಡುವ ಷರತ್ತಿಗೊಳಪಟ್ಟಿರುತ್ತದೆ.

4. ದುರ್ನಡತೆಯಿಂದಾಗಿ ಸರ್ಕಾರಕ್ಕೆ ನಷ್ಟ ಉಂಟಾದಲ್ಲಿ ಅದನ್ನು ಸಂಸ್ಥೆಗೆ ತುಂಬಿಕೊಡುವ ಷರತ್ತಿಗೆ ಒಳಪಟ್ಟಿರುತ್ತದೆ.

5. ಹುದ್ದೆಯು ತಾತ್ಕಾಲಿಕವಾಗಿದ್ದು, ಗುತ್ತಿಗೆ ಆಧಾರವಾಗಿರುವುದರಿಂದ ಸರ್ಕಾರದಿಂದ / ಈ ಸಂಸ್ಥೆಯಿಂದ ಯಾವುದೇ ನೇಮಕಾತಿಗಾಗಲೀ ಅಥವಾ ಯಾವುದೇ ರೀತಿಯ ಕ್ಲೇಮ್‌ಗಾಗಲಿ ಅರ್ಹನಲ್ಲವೆಂಬ ಹಾಗೂ ಸಂಚಿತ ವೇತನವನ್ನು ಹೊರತು ಪಡಿಸಿ ಇತರೆ ಯಾವುದೇ ಭತ್ಯೆಗಳನ್ನು ಪಡೆಯಲು ಅರ್ಹನಲ್ಲವೆಂಬ ಷರತ್ತಿಗೊಳಪಟ್ಟಿರುತ್ತದೆ. ಈ ಸಂಸ್ಥೆಯಲ್ಲಿ ಖಾಯಂ ಆಗಿ ನೇಮಕ ಹೊಂದಲು ಯಾವುದೇ ರೀತಿಯ ವ್ಯವಹಾರಿಕವಾಗಿ ಒತ್ತಡ ತರುವುದಿಲ್ಲವೆಂಬ ಷರತ್ತಿಗೆ ಒಳಪಟ್ಟಿರುತ್ತದೆ.

6. ಸದರಿ ನೇಮಕ ಹೊಂದಿದ ಗುತ್ತಿಗೆ ನೌಕರರು ನೇಮಿಸಿದ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಲ್ಲಿ ಕರ್ತವ್ಯಕ್ಕೆ ಹಾಜರಾಗಿ ವೈದ್ಯಕೀಯ ಅಧೀಕ್ಷಕರ ಸೂಚನೆ ಮೇರೆಗೆ ನೇಮಿಸಿದ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು.

7. ಕರ್ತವ್ಯ ನಿರ್ವಹಿಸಿದ ಒಂದು ತಿಂಗಳಿಗೆ 1 ದಿನ ಸಾಂದರ್ಭಿಕ ರಜೆಗೆ ಮಾತ್ರ ಅರ್ಹರಿರುತ್ತಾರೆ.

8. ಗುತ್ತಿಗೆ ಮೇಲೆ ನೇಮಕಗೊಳ್ಳುವ ಸಿಬ್ಬಂದಿಗಳು ಸಂಸ್ಥೆಯ/ಆಸ್ಪತ್ರೆಯ ಆವರಣದಲ್ಲಿನ ಯಾವುದೇ ರೀತಿಯಲ್ಲಿ ಮತ್ತೊಂದು ಕರ್ತವ್ಯವನ್ನು ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನಿರ್ವಹಿಸತಕ್ಕದಲ್ಲ.

ಮೇಲಿನ ಷರತ್ತುಗಳ ಘೋಷಣಾ ಪತ್ರವನ್ನು 100.00 ರೂ ಗಳ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದು ಈ ಸಂಸ್ಥೆಯ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು.

**ನಿರ್ದೇಶಕರು ಹಾಗೂ ಡೀನ್,**
**ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ**
**ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು**

ಪ್ರತಿಯನ್ನು:-

1. ವೈದ್ಯಕೀಯಾ ಅಧೀಕ್ಷಕರು ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು.
2. ಮುಖ್ಯ ಆಡಳಿತಾಧಿಕಾರಿಗಳು, ಬೆಂವೈವಿಸಂಸಂ ಬೆಂಗಳೂರು.
3. ಮುಖ್ಯಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಬೆಂವೈವಿಸಂಸಂ, ಬೆಂಗಳೂರು.
4. ನಿರ್ದೇಶಕರ ಆಪ್ತ ವಿಭಾಗ ಬೆಂವೈವಿಸಂಸಂ, ಬೆಂಗಳೂರು.
5. ಶುಶ್ರೂಷಕ ಅಧೀಕ್ಷಕರು, ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು.
6. ಸಂಬಂಧ ಪಟ್ಟ ಅಭ್ಯರ್ಥಿಗೆ.
7. ವೇತನ ವಿಭಾಗ, ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು.
8. ಕಛೇರಿ ಪ್ರತಿ.